

# ಅದಿತಿಯ ‘ಧೈರ್ಯ’ ಪರ್ವ

ಅದಿತಿ ಸಿಕ್ಕಾಪಟ್ಟೆ ಖುಷಿಯಲ್ಲಿದ್ದಾರೆ. ‘ಕ್ಲೌಡ್ ನೈನ್’ ಎನ್ನುತ್ತಾರಲ್ಲ – ಅದಿತಿಯ ಖುಷಿ ಈಗ ಆಕಾಶದೆತ್ತರದಲ್ಲೇ ಇದೆ. ಅವರ ಸಂಭ್ರಮಕ್ಕೆ ಕಾರಣವಾಗಿರುವುದು ‘ಧೈರ್ಯಂ’ ಸಿನಿಮಾ. ನಟಿಯಾಗಬೇಕು, ನಾಯಕಿಯಾಗಿ ತೆರೆಯ ಮೇಲೆ ಮಿಂಚಬೇಕು ಎನ್ನುವ ಅವರ ಕನಸು ಈ ಚಿತ್ರದ ಮೂಲಕ ನನಸಾಗಿದೆ. ತೆರೆ ಕಾಣಲು ಸಿದ್ಧತೆ ನಡೆಸಿರುವ ‘ಧೈರ್ಯಂ’ ಅದಿತಿ ಪಾಲಿಗೆ ಸವಿದಷ್ಟೂ ಮಿಗುವ ಸಿಹಿನೆನಪುಗಳ ಬುತ್ತಿ.

‘ಧೈರ್ಯಂ’ನ ಈ ಹುಡುಗಿ ದಾವಣಗೆರೆಯ ಹುಡುಗಿ. ದೃಶ್ಯಮಾಧ್ಯಮದ ಕನಸು ಹೊತ್ತು ಕಿರುತೆರೆಯಲ್ಲಿ ಮಿನುಗಿದ್ದಾಯಿತು. ಮುಂದಿನ ಸರದಿ ಬೆಳ್ಳಿತೆರೆಯದು. ಚೊಚ್ಚಿಲ ಚಿತ್ರದಲ್ಲೇ ಒಳ್ಳೆಯ ಚಿತ್ರತಂಡದೊಂದಿಗೆ ಕೆಲಸ ಮಾಡಿದ ತೃಪ್ತಿ ಅವರದು. ನಿರ್ದೇಶಕ ಶಿವ ತೇಜಸ್ ಹಾಗೂ ನಾಯಕ ಅಜಯ್‌ರಾವ್ ಅವರೊಂದಿಗಿನ ಕೆಲಸದ ಒಡನಾಟ ಅವರ ಪಾಲಿಗೆ ಕಲಿಕೆಯ ವೇದಿಕೆಯಾಗಿಯೂ ಪರಿಣಮಿಸಿದೆ.

ನಾಯಕ ಅಜಯ್‌ರಾವ್ ‘ಕೃಷ್ಣ’ನ ಪಾತ್ರಗಳಿಗೆ ಹೆಸರಾದವರು. ರಸಮಯ ಪ್ರೇಮಕಥನಗಳಿಗೂ, ದುರಂತದ ಪ್ರೇಮಪಾತ್ರಗಳಿಗೂ ಜೀವ ತುಂಬಿದವರು. ಸ್ಯಾಂಡಲ್‌ವುಡ್‌ನ ಈ ‘ಕೃಷ್ಣ’ನೀಗ ಇಮೇಜ್ ಬದಲಿಸಿಕೊಳ್ಳುವ ಪ್ರಯತ್ನದಲ್ಲಿದ್ದಾರೆ. ‘ಧೈರ್ಯಂ’ ಚಿತ್ರದಲ್ಲಿನ ಅವರ ಪಾತ್ರಕ್ಕೆ ಕೊಂಚ ನೆಗೆಟಿವ್ ಷೇಡ್ ಇದೆ. ಶೀರ್ಷಿಕೆಯೊಂದಿಗಿನ ‘ಸರ್ವತ್ರ ಸಾಧನಂ’ ಎನ್ನುವ ವಿಶೇಷಣವೇ – ಬದುಕಲಿಕ್ಕಾಗಿ, ಹಣ ಸಂಪಾದಿಸಲಿಕ್ಕಾಗಿ ನಾಯಕ ತಾಳುವ ನಾನಾ ಅವತಾರಗಳನ್ನು ಸೂಚಿಸುವಂತಿದೆ.

ನಿರ್ದೇಶಕರಿಗೆ ‘ಧೈರ್ಯಂ’ ಎರಡನೇ ಸಿನಿಮಾ. ‘ಮಳೆ’ ಅವರ ನಿರ್ದೇಶನದ ಚೊಚ್ಚಿಲ ಸಿನಿಮಾ. ‘ಮಳೆ’ಯಲ್ಲಿ ಪ್ರೇಮಕಥನವೊಂದನ್ನು ನಿರೂಪಿಸಿದ್ದ ಅವರು, ಎರಡನೇ ಚಿತ್ರದಲ್ಲಿ ಬೆಂಕಿಮಳೆ ಸುರಿಸಿದ್ದಾರಂತೆ. ಮೇ ತಿಂಗಳಲ್ಲಿ ‘ಧೈರ್ಯಂ’ ತೆರೆ ಕಾಣುವ ಸಾಧ್ಯತೆಯಿದೆ.

